# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ    E-mail : kannadapostnews@gmail.com    / ಕನ್ನಡ post    Price: ₹1

Vol.No.02 | Issue. 201 | Pages. 2 | Date: 20-07-2026, MONDAY    RNI NO: KARKAN/2024/89601    Kannada Daily

ಸಂಪುಟ : 02 – ಸಂಚಿಕೆ : 201 – ಪುಟಗಳು : 2    20-07-2026 ಸೋಮವಾರ    Ph: 8762954248    ದರ : ₹1

# ಶ್ರದ್ಧಾಂಜಲಿ

ಆಸ್ತಾಂ ತಾವದಿಯಂ ಪ್ರಸೂತಿ ಸಮಯೇ ದುರ್ವಾರಶೂಲವ್ಯಥಾ
ನೈರುಜ್ಯಂ ತನುಶೋಷಣಂ ಮಲಮಯೀ ಶಯ್ಯಾ ಚ ಸಾಂವತ್ಸರೀ ।
ಏಕಸ್ಯಾಪಿ ನ ಗರ್ಭಭಾರಭರಣ ಕ್ಲೇಶಸ್ಯ ಯಸ್ಯ ಕ್ಷಮಃ
ದಾತುಂ ನಿಷ್ಕೃತಿಮುನ್ನತೋಮಪಿ ತನಯಸ್ತಸ್ಯೈ ಜನನ್ಯೈ ನಮಃ ॥
–ಶ್ರೀ ಆದಿಶಂಕರಾಚಾರ್ಯರು

**ತಾತ್ಪರ್ಯ :**
ತಾಯಿಯು ಮಗುವನ್ನು ಹೆರುವಾಗ ಪಡುವ ಯಾತನೆಯು ಅಸಹನೀಯ. ಅವಳು ಮಗುವಿನ ಪೋಷಣೆಯಲ್ಲಿ ಅನಾರೋಗ್ಯಕ್ಕೆ ಈಡಾಗುವುದು, ಮಗುವಿನ ಮಲಮೂತ್ರಾದಿಗಳನ್ನು ಬಳಿದು ಹಾಕುವುದು, ವರ್ಷಾನುಕಾಲ ಉಣ್ಣುವ ಕಷ್ಟಗಳನ್ನು ನೆನಪಿಸಿಕೊಂಡರೆ, ಆಕೆಯ ಋಣವನ್ನು ತೀರಿಸಲು ಈ ಜನ್ಮ ಸಾಲದು.



## ಅನ್ನಪೂರ್ಣೇಶ್ವರಿ

## ಶ್ರೀಮತಿ ಚನ್ನಮ್ಮ ದೇವೇಗೌಡ ರವರು

(ಜನನ: ಜೂನ್ 1937 | ಮರಣ: 18 ಜುಲೈ 2026)

ಸಹೋದರಿ, ಧರ್ಮಪತ್ನಿ, ತಾಯಿಯಾಗಿ ಎಲ್ಲಾ ಜವಾಬ್ದಾರಿಗಳನ್ನು ಸಾರ್ಥಕವಾಗಿ ಪೂರೈಸಿದ ನೀವು ಮಮತಾಮಯಿ, ಕರುಣಾಮಯಿ ಆಗಿದ್ದಿರಿ. ಮನೆ ಬಾಗಿಲಿಗೆ ಬಂದವರನ್ನು ಮಕ್ಕಳಂತೆ ಸಲುಹಿದ ಮಹಾತಾಯಿ.
ಇಡೀ ಬದುಕನ್ನು ನಿಸ್ವಾರ್ಥವಾಗಿ ಸವೆಸಿ ಶಿವೈಕ್ಯರಾದ ನಿಮ್ಮ ಅಗಲಿಕೆ ನಮಗೆಲ್ಲರಿಗೂ ಅತೀವ ದುಃಖ ಉಂಟು ಮಾಡಿದೆ.
ನಿಮ್ಮ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂದು ಆ ಭಗವಂತನಲ್ಲಿ ಭಕ್ತಿಪೂರ್ವಕವಾಗಿ ಪ್ರಾರ್ಥಿಸುತ್ತೇವೆ.

LOCATION QR CODE

**ಅಂತ್ಯಕ್ರಿಯೆ:**
**ದಿನಾಂಕ:** 20-07-2026, ಸೋಮವಾರ
ಮಧ್ಯಾಹ್ನ 2:00 ರಿಂದ ಸಂಜೆ 4:15 ಗಂಟೆವರೆಗೆ
**ಸ್ಥಳ:** ಮಾವಿನಕೆರೆ ಶ್ರೀ ರಂಗನಾಥಸ್ವಾಮಿ ಬೆಟ್ಟದ ತಪ್ಪಲು

**ಇಂತಿ ದುಃಖತಪ್ತರು**
**ಶ್ರೀ ಹೆಚ್.ಡಿ. ದೇವೇಗೌಡರ ಕುಟುಂಬ ಮತ್ತು ಅಭಿಮಾನಿಗಳು**

**ಜೋಕ್ ಫಾಲ್ಸ್**

ಶಿಕ್ಷಕರು: ಶೂನ್ಯ ಅಂದ್ರೆ ಏನು?
ವಿದ್ಯಾರ್ಥಿ: ಸರ್, ನೀವು ಕ್ಲಾಸ್‌ನಲ್ಲಿ ಪಾಠ ಮಾಡುವಾಗ ನನ್ನ ತಲೆಯಲ್ಲಿ ಉಳಿಯುವ ವಿಷಯ!

**ಮನೆ ಮದ್ದು**

ಲವಂಗದ ಎಣ್ಣೆ: ಕಾಲು ನೋವು ಇದ್ದಲ್ಲಿ ಲವಂಗದ ಎಣ್ಣೆಯನ್ನು ಹಚ್ಚಿ ಮಸಾಜ್ ಮಾಡಬಹುದು (ಅತಿ ಕಡಿಮೆ ಪ್ರಮಾಣದಲ್ಲಿ)

**ವೇದ ಸುಳ್ಳಾದರೂ, ಗಾದೆ...**

ಅಹಂಕಾರದ ಪತನ: ಗಿಡ ಬೆಳೆದಂತೆ ಬಾಗಬೇಕು, ಮನುಷ್ಯ ಬೆಳೆದಂತೆ ಅಹಂಕಾರ ತೊರೆಯಬೇಕು.

**ಇಂದಿನ ದಿನಚರಿ**

**ರಾಹುಕಾಲ**
7-30 ರಿಂದ 9-00

ಪರಾಭವ ನಾಮ ಸಂವತ್ಸರ
ಉತ್ತರಾಯಣ -ಗ್ರೀಷ್ಮ ಋತು
ಅಷಾಡ ಮಾಸ ಶುಕ್ಲಪಕ್ಷ ಷಷ್ಠಿ

# ಮಣ್ಣಿನ ಮಗಳ ಅಂತಿಮ ತವರು ಯಾನ

## ಅಭಿಮಾನಿಗಳ ಕಣ್ಣೀರಿನ ಮಹಾಪೂರದ ನಡುವೆ ಹರದನಹಳ್ಳಿಯ ಮಾತೃಶ್ರೀ ಇನ್ನು ನೆನಪು ಮಾತ್ರ

**ಹಾಸನ:** ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರ ಧರ್ಮಪತ್ನಿ ಚೆನ್ನಮ್ಮ ಅವರ ನಿಧನದಿಂದಾಗಿ ಇಡೀ ಹಾಸನ ಜಿಲ್ಲೆ ಶೋಕಸಾಗರದಲ್ಲಿ ಮುಳುಗಿದೆ. ದಿವಂಗತರ ಪಾರ್ಥಿವ ಶರೀರವನ್ನು ಹೊತ್ತ ವಾಹನವು ಭಾನುವಾರ ರಾತ್ರಿ ಹಾಸನದ ಗಡಿ ಪ್ರವೇಶಿಸುತ್ತಿದ್ದಂತೆಯೇ, ತಮ್ಮ ನೆಚ್ಚಿನ ತಾಯಿಯ ಅಂತಿಮ ದರ್ಶನ ಪಡೆಯಲು ಸಹಸ್ರಾರು ಸಂಖ್ಯೆಯ ಅಭಿಮಾನಿಗಳ ಸಾಗರವೇ ಹರಿದುಬಂದಿತು. ಭುವನಹಳ್ಳಿ ಕೂಡು ರಸ್ತೆಯಿಂದ ಹಿಡಿದು ನಗರದ ಪ್ರಮುಖ ಕೇಂದ್ರವಾದ ಎನ್.ಆರ್. ಸರ್ಕಲ್‌ವರೆಗಿನ ಇಡೀ ರಸ್ತೆಯುದ್ದಕ್ಕೂ ಸಾರ್ವಜನಿಕರು ಹಾಗೂ ಅಭಿಮಾನಿಗಳು ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಕಿಕ್ಕಿರಿದು ಜಮಾಯಿಸಿದ್ದರು. ಇಡೀ ಮೆರವಣಿಗೆಯ ಉದ್ದಕ್ಕೂ ಹರಿದುಬಂದ ಜನಸ್ತೋಮವು ಕಣ್ಣೀರಿನೊಂದಿಗೆ ನೆಚ್ಚಿನ ತಾಯಿಗೆ ಶ್ರದ್ಧಾಂಜಲಿ ಸಮರ್ಪಿಸಿತು.

ಹಾಸನ ಶಾಸಕ ಸ್ವರೂಪ್ ಪ್ರಕಾಶ್ ಅವರು ಇಡೀ ಮೆರವಣಿಗೆಯ ಮಾರ್ಗದುದ್ದಕ್ಕೂ ಹಾಕಲು ಎರಡು ಟ್ರ್ಯಾಕ್ಟರ್‌ಗಳ ತುಂಬಾ ಬಗೆಬಗೆಯ ಹೂವುಗಳನ್ನು ತರಿಸಿ, ಭಾವುಕ ಕ್ಷಣದಲ್ಲಿ ಪಾರ್ಥಿವ ಶರೀರದ ಮೇಲೆ ಭವ್ಯ ಪುಷ್ಪವೃಷ್ಟಿ ಮಾಡಿಸಿದ್ದು ಗಮನ ಸೆಳೆಯಿತು.

**ವರುಣನ ಕಣ್ಣೀರಿನ ಸಿಂಚನ:** ಪಾರ್ಥಿವ ಶರೀರ ನಗರಕ್ಕೆ ಆಗಮಿಸುವ ಸ್ವಲ್ಪ ಸಮಯದ ಮುನ್ನವೇ ಹಾಸನ ನಗರದಲ್ಲಿ ವರುಣನ ಸಿಂಚನವಾಗಿತ್ತು. ಮಳೆಯಿಂದಾಗಿ ನಗರದ ರಸ್ತೆಗಳೆಲ್ಲವೂ ಸಂಪೂರ್ಣ ಸ್ವಚ್ಛಗೊಂಡಿದ್ದವು. ಇದನ್ನು ಕಂಡ ಅಭಿಮಾನಿಗಳು, ಚೆನ್ನಮ್ಮ ಅವರ ಪವಿತ್ರ ಆಗಮನಕ್ಕಾಗಿ ಮಳೆರಾಯನೇ ರಸ್ತೆ ಸ್ವಚ್ಛಗೊಳಿಸಿ ಭಾವುಕ ನಮನ ಸಲ್ಲಿಸಿದ್ದಾನೆ ಎಂದು ಮಾತನಾಡಿಕೊಳ್ಳುತ್ತಿದ್ದ ದೃಶ್ಯ ಅಲ್ಲಿದ್ದ ಪ್ರತಿಯೊಬ್ಬರ ಮನಕಲಕುವಂತಿತ್ತು. ಸಂಜೆ 4 ಗಂಟೆಯಿಂದಲೇ ನೂರಾರು ಅಭಿಮಾನಿಗಳು ಕಾತರದಿಂದ



ಹಿರಿಸಾವೆಯ ಬಳಿ ಚೆನ್ನಮ್ಮ ಅವರ ಪಾರ್ಥಿವ ಶರೀರ ಆಗಮಿಸಿದಾಗ ಸಹಸ್ರ ಸಂಖ್ಯೆಯಲ್ಲಿ ನೆರೆದಿದ್ದ ಅಭಿಮಾನಿಗಳು ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದರು.

ಕಾಯುತ್ತಿದ್ದರು. ಜಿಲ್ಲಾಡಳಿತ ಹಾಗೂ ಜೆ.ಡಿ.ಎಸ್ ಕಾರ್ಯಕರ್ತರು ವಿಶೇಷ ಶ್ರದ್ಧಾಂಜಲಿ ಅರ್ಪಿಸಿದರು. ತದನಂತರ ಭವ್ಯ ಮೆರವಣಿಗೆಯು ಎನ್.ಆರ್. ಸರ್ಕಲ್ ಮೂಲಕ ಹೊಳೆನರಸೀಪುರದತ್ತ ಸಾಗಿತು.

**ಅತ್ತೆಯ ಅಗಲಿಕೆಗೆ ಕಣ್ಣೀರಾದ ಭವಾನಿ ರೇವಣ್ಣ**

ಹೊಳೆನರಸೀಪುರದಲ್ಲಿ ತೀವ್ರ ಭಾವುಕ ರಾಗಿ ಮಾತನಾಡಿದ ಸೊಸೆ ಭವಾನಿ ರೇವಣ್ಣ, ಅವರು ನಮಗೆ ಅತ್ತೆ ಆಗಿರಲಿಲ್ಲ, ತಾಯಿಯಂತೆ ಪ್ರೀತಿ ತೋರಿದವರು. ಅವರ ಅಗಲಿಕೆ ನೋವು ನಮಗೆ ಸಹಿಸಲು ಸಾಧ್ಯವಾಗುತ್ತಿಲ್ಲ. ರೇವಣ್ಣ ಅವರ ದುಃಖವನ್ನು ನಮಗೆ ನೋಡಲು ಆಗುತ್ತಿಲ್ಲ, ಮಾತನಾಡಿಸಿದರೆ ಸಾಕು ಅಳುತ್ತಾರೆ ಎಂದರು. ಅಮ್ಮ ಯಾವಾಗ ಬಂದರೂ ನಾನೇ ಮನೆಯಿಂದ ಅಡುಗೆ ಮಾಡಿ ತೆಗೆದುಕೊಂಡು ಹೋಗುತ್ತಿದ್ದೆ. ದೊಡ್ಡವರು ಹಾಗೂ ಅಮ್ಮನ ಬಾಂಧವ್ಯ ಹೇಳಲು ಸಾಧ್ಯವಿಲ್ಲ. ಅಮ್ಮನಿಗೆ ಹೊಳೆನರಸೀಪುರ ಹಾಗೂ ಇಲ್ಲಿನ ಜನರೆಂದರೆ ಎಲ್ಲಿಲ್ಲದ ಪ್ರೀತಿ. ಯಾರೇ ಮನೆಗೆ ಹೋದರೂ ಅಕ್ಕರೆಯಿಂದ ಸತ್ಕರಿಸುತ್ತಿದ್ದರು ಎಂದು ಸ್ಮರಿಸಿದರು.

**2001ರ ಕರಾಳ ಘಟನೆ ನೆನಪು:** ಇದೇ ವೇಳೆ 2001ರ ಘಟನೆಯನ್ನು ನೆನೆದ ಅವರು, ಅಂದು ದೇವೇಶ್ವರ ದೇವಾಲಯದಲ್ಲಿ ಪೂಜೆ ಸಲ್ಲಿಸುವಾಗ ರೇವಣ್ಣ ಅವರ ಮೇಲೆ ಆಸಿಡ್ ದಾಳಿಗೆ ಪ್ಲಾನ್ ಆಗಿತ್ತು. ಆದರೆ ಅಂದು ಅಮ್ಮ ಬದುಕಿದ್ದೇ ಪವಾಡ. ಅವರಿಗೆ ಅದು ಪುನರ್ಜನ್ಮ. ಅವರ ದೈವ ಶಕ್ತಿಯೇ ಅಂದು ಅವರನ್ನು ಕಾಪಾಡಿತ್ತು ಎಂದು ಹಳೇ ನೆನಪುಗಳನ್ನು ಹಂಚಿಕೊಂಡರು. ಇತ್ತ ದೇವೇಗೌಡರ ಹುಟ್ಟೂರು ಹರದನಹಳ್ಳಿಯಲ್ಲಿ ನೀರವ ಮೌನ ಆವರಿಸಿದ್ದು, ಚಿಕ್ಕಮ್ಮನ ಸಾವಿನ ಸುದ್ದಿ ಕೇಳಿ ಅವರ ಸಂಬಂಧಿ ನಂಜಮ್ಮ ಭಾವುಕರಾಗಿದ್ದಾರೆ. ದೇವೇಗೌಡರು ಪ್ರಧಾನಿಯಾದರೂ ಅವರಿಗೆ ಅಹಂ ಇರಲಿಲ್ಲ. ತಾಯಿಯ ತಾತ ಸುಬ್ಬೇಗೌಡರ ಕಾಲದಿಂದಲೂ ಈ ಊರಿನೊಂದಿಗೆ ಅವಿನಾಭಾವ ಸಂಬಂಧವಿದೆ ಎಂದು ಕಣ್ಣೀರು ಹಾಕಿದರು.

**ಶ್ರೇಯಸ್ ಪಟೇಲ್ ಸಾಂತ್ವನ; ರಾಜಕೀಯ ಮರೆತ ಗಣ್ಯರು**

ಚೆನ್ನಮ್ಮ ಅವರ ಅಂತ್ಯಕ್ರಿಯೆ ನಡೆಯುವ ಸ್ಥಳಕ್ಕೆ ಅಧಿಕಾರಿಗಳೊಂದಿಗೆ ಸಂಸದ ಶ್ರೇಯಸ್ ಪಟೇಲ್ ಭೇಟಿ ನೀಡಿ ಪರಿಶೀಲಿಸಿದರು. ಇದೇ ವೇಳೆ ತೀವ್ರ ದುಃಖದಲ್ಲಿದ್ದ ಎಚ್.ಡಿ. ರೇವಣ್ಣ ಅವರಿಗೆ ಸಾಂತ್ವನ ಹೇಳಿದರು. ರೇವಣ್ಣ ಅವರು ಶ್ರೇಯಸ್ ಪಟೇಲ್ ಹೆಗಲ ಮೇಲೆ ಕೈಹಾಕಿ ಭಾವುಕರಾಗಿ ಮಾತನಾಡಿದರು. ಬಳಿಕ ಮಾತನಾಡಿದ ಸಂಸದರು, ರಾಜ್ಯಕ್ಕೆ ಇಂದು ಕರಾಳ ದಿನ. ಹಿರಿಯ ಜೀವ ನಮ್ಮನ್ನು ಅಗಲಿದೆ. ನಮ್ಮ ಅಜ್ಜಿ ಹಾಗೂ ಚೆನ್ನಮ್ಮ ಅಜ್ಜಿ ಗಳಸ್ಯ ಕಂಟಸ್ಯರಂತಿದ್ದರು. ಆದರೆ ಸಣ್ಣಪುಟ್ಟ ವಿಷಯಗಳಿಂದ ದೂರಾದರು. ಇವತ್ತಿನ ರಾಜಕೀಯವೇ ಬೇರೆ, ಅದನ್ನೆಲ್ಲಾ ಬದಿಗಿಟ್ಟು ನಾವೆಲ್ಲರೂ ಅಂತ್ಯಸಂಸ್ಕಾರದಲ್ಲಿ ಪಾಲ್ಗೊಳ್ಳಬೇಕು ಎಂದರು.

**ಮಾವಿನಕೆರೆ ಬೆಟ್ಟದ ತಪ್ಪಲಿನಲ್ಲಿ ಅಂತ್ಯಕ್ರಿಯೆ ಭರದ ಸಿದ್ಧತೆ**

ದಿವಂಗತ ಚೆನ್ನಮ್ಮ ಅವರ ಕೊನೆಯ ಇಚ್ಛೆಯಂತೆಯೇ, ಅವರ ಆರಾಧ್ಯ ದೈವವಾಗಿರುವ ಮಾವಿನಕೆರೆ ರಂಗನಾಥ ಸ್ವಾಮಿ ಬೆಟ್ಟದ ತಪ್ಪಲಿನಲ್ಲಿ ಒಕ್ಕಲಿಗ ಸಂಪ್ರದಾಯದ ಧಾರ್ಮಿಕ ವಿಧಿವಿಧಾನಗಳೊಂದಿಗೆ ಅಂತ್ಯಕ್ರಿಯೆ ನೆರವೇರಲಿದೆ. ಬೆಂಗಳೂರಿನ ಖ್ಯಾತ ವಾಸ್ತು ತಜ್ಞ ಹರಿಪ್ರಸಾದ್ ಅವರು ಖುದ್ದಾಗಿ ಸ್ಥಳಕ್ಕೆ ಭೇಟಿ ನೀಡಿ ವಾಸ್ತು ಪ್ರಕಾರವೇ ಅಂತ್ಯಕ್ರಿಯೆಯ ಜಾಗವನ್ನು ನಿಗದಿಪಡಿಸಿದ್ದಾರೆ. ಈ ಮಾನವೀಯ ಹಾಗೂ ಭಾವುಕ ವಿದಾಯದ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ್, ಕೇಂದ್ರ ಸಚಿವರಾದ ಪ್ರಹ್ಲಾದ್ ಜೋಶಿ, ವಿ. ಸೋಮಣ್ಣ ಸೇರಿದಂತೆ ದೇಶ-ರಾಜ್ಯದ ನಾನಾ ಭಾಗಗಳ ರಾಜಕೀಯ ಧುರೀಣರು ಭಾಗವಹಿಸಲಿದ್ದಾರೆ.

- **5 ತಾತ್ಕಾಲಿಕ ಹೆಲಿಪ್ಯಾಡ್:** ವಿವಿಐಪಿ ಗಣ್ಯರು ಹೆಲಿಕಾಪ್ಟರ್ ಮೂಲಕ ನೇರವಾಗಿ ಆಗಮಿಸುವ ಹಿನ್ನೆಲೆಯಲ್ಲಿ ಹರದನಹಳ್ಳಿ ಬಳಿ 2 ಹಾಗೂ ಹೊಳೆನರಸೀಪುರ ವ್ಯಾಪ್ತಿಯಲ್ಲಿ 3 ಸೇರಿದಂತೆ ಒಟ್ಟು 5 ತಾತ್ಕಾಲಿಕ ಹೆಲಿಪ್ಯಾಡ್‌ಗಳನ್ನು ನಿರ್ಮಿಸಲಾಗಿದೆ.
- **ದರ್ಶನಕ್ಕೆ ಅಚ್ಚುಕಟ್ಟು ವ್ಯವಸ್ಥೆ:** ಪಾರ್ಥಿವ ಶರೀರವನ್ನು ಹೊಳೆನರಸೀಪುರಕ್ಕೆ ತರಲಾಗುತ್ತಿದ್ದು, ಸಾರ್ವಜನಿಕರು ಸಾಲಾಗಿ ಬಂದು ದರ್ಶನ ಪಡೆಯಲು ಬ್ಯಾರಿಕೇಡ್‌ಗಳ ಅಳವಡಿಕೆ ಕಾರ್ಯ ಪೂರ್ಣಗೊಂಡಿದೆ.
- **ಜಿಲ್ಲಾದ್ಯಂತ ಡ್ರೈ ಡೇ ಘೋಷಣೆ:** ಹೆಚ್ಚಿನ ಜನರು ಸೇರುವ ಸಾಧ್ಯತೆ ಇರುವುದರಿಂದ ಮುಂಜಾಗ್ರತಾ ಕ್ರಮವಾಗಿ ಜಿಲ್ಲೆಯಾದ್ಯಂತ ಎರಡು ದಿನಗಳ ಕಾಲ ಕಟ್ಟುನಿಟ್ಟಿನ ಮದ್ಯ ಮಾರಾಟ ನಿಷೇಧ ಜಾರಿಗೊಳಿಸಿ ಡಿಸಿ ಕೆ.ಎಸ್. ಲತಾಕುಮಾರಿ ಆದೇಶಿಸಿದ್ದಾರೆ.
- **ಉಚಿತ ಸಾರಿಗೆ ಬಸ್ ವ್ಯವಸ್ಥೆ:** ತಾಲ್ಲೂಕು ಕೇಂದ್ರ ಹಾಗೂ ವಿವಿಧ ಗ್ರಾಮ ಪಂಚಾಯತಿಗಳಾದ ಸಾಲಗಾಮೆ, ದುದ್ದ, ಶಾಂತಿಗ್ರಾಮ, ಕಂದಲಿ, ಗಂಡಸಿ, ಚನ್ನರಾಯಪಟ್ಟಣ, ಅರಸೀಕರೆ, ಬೇಲೂರು, ಆಲೂರು ಭಾಗಗಳಿಂದ ಹರದನಹಳ್ಳಿಗೆ ಸಾರಿಗೆ ಬಸ್ ವ್ಯವಸ್ಥೆ ಕಲ್ಪಿಸಲಾಗಿದೆ.
- **ಶಾಲಾ-ಕಾಲೇಜುಗಳಿಗೆ ರಜೆ:** ಅಸಾಮಾನ್ಯ ಜನಸಂದಣಿ ಹಾಗೂ ವಾಹನ ದಟ್ಟಣೆ ಹೆಚ್ಚಾಗುವ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಸುರಕ್ಷತೆ ಮತ್ತು ಸುಗಮ ಸಂಚಾರದ ದೃಷ್ಟಿಯಿಂದ ಹೊಳೆನರಸೀಪುರ ತಾಲ್ಲೂಕಿನ ಎಲ್ಲಾ ಶಾಲೆ, ಕಾಲೇಜು ಹಾಗೂ ಅಂಗನವಾಡಿಗಳಿಗೆ ರಜೆ ಘೋಷಿಸಲಾಗಿದೆ. ಮಂಡ್ಯ ಎಸ್ಪಿ ಶೋಭರಾಣಿ ನೇತೃತ್ವದಲ್ಲಿ ಮನೆಯ ಬಳಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ.

## ಹಾಸನ: 'ಶತಕಂಠ ಗೀತ ನಮನ' ಮೂಲಕ ಭಾರತ ಮಾತೆಗೆ ಗೌರವ



**ಹಾಸನ:** ನಗರದ ಆದಿಚುಂಚನಗಿರಿ ಕಲ್ಯಾಣ ಮಂಟಪದಲ್ಲಿ ರಾಷ್ಟ್ರ ಸೇವಿಕಾ ಸಮಿತಿಯ ವತಿಯಿಂದ ಇತ್ತೀಚೆಗೆ 'ಭಾರತ ಮಾತೆಗೆ ಶತಕಂಠ ಗೀತ ನಮನ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಉದ್ದೇಶ ಕುರಿತು ಮಾತನಾಡಿದ ಸಮಿತಿಯ ಮುಖ್ಯ ವಕ್ತಾರೆ ಪೂರ್ಣಿಮಾ, ರಾಷ್ಟ್ರವು ಕೇವಲ ಭೌಗೋಳಿಕ ಗಡಿಯಲ್ಲ, ಅದು ನಮ್ಮ ಅಸ್ಮಿತೆ. ಮಹಿಳೆಯರಲ್ಲಿ ರಾಷ್ಟ್ರಪ್ರೇಮ, ಸಂಸ್ಕೃತಿ ಮತ್ತು ಸಂಸ್ಕಾರವನ್ನು ಬಿತ್ತುವ ಕೆಲಸವನ್ನು ಸಮಿತಿಯು ನಿರಂತರವಾಗಿ ಮಾಡುತ್ತಿದೆ ಎಂದು ತಿಳಿಸಿದರು. ಮಾತೃಭೂಮಿಗೆ ಗೀತ ನಮನ ಸಲ್ಲಿಸುವ ಮಹತ್ವದ ಕುರಿತು ಅವರು ಉಪನ್ಯಾಸ ನೀಡಿದರು.

ಮುಖ್ಯ ಅತಿಥಿಯಾಗಿದ್ದ ಸೌಮ್ಯ ಕಾಂತರಾಜು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ನಗರದ ವಿವಿಧ ಸಂಘ-ಸಂಸ್ಥೆಗಳ ನೂರಕ್ಕೂ ಹೆಚ್ಚು ಮಹಿಳೆಯರು ಪಾಲ್ಗೊಂಡು, ಒಟ್ಟು 15 ದೇಶಭಕ್ತಿ ಗೀತೆಗಳನ್ನು ಸಮೂಹ ಗಾಯನದ ಮೂಲಕ ಹಾಡಿದರು.

ದೇಶಪ್ರೇಮದ ಗೀತೆಗಳು ನೆರೆದಿದ್ದವರಲ್ಲಿ ಭಕ್ತಿ ಭಾವ ಮೂಡಿಸಿದವು. ರಾಷ್ಟ್ರ ಸೇವಿಕಾ ಸಮಿತಿಯ ಹಾಸನ ಘಟಕದ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.



**ಸಕಲೇಶಪುರ:** ವಳಲಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಾಡಾನೆ ಹಾವಳಿಯಿಂದ ತೀವ್ರ ಸಂಕಷ್ಟಕ್ಕೆ ಸಿಲುಕಿರುವ ಬೆಳೆಗಾರರಿಗೆ ತಕ್ಷಣವೇ ಪರಿಹಾರ ನೀಡಬೇಕು ಮತ್ತು ಹಾವಳಿ ನಡೆಸುತ್ತಿರುವ ಒಂಟಿ ಕಾಡಾನೆಯನ್ನು ಸೆರೆ ಹಿಡಿದು ಸ್ಥಳಾಂತರಿಸಬೇಕು ಎಂದು ಆಗ್ರಹಿಸಿ, ವಳಲಹಳ್ಳಿ ಬೆಳೆಗಾರರ ಸಂಘದ ಪದಾಧಿಕಾರಿಗಳು ಹಾಸನ ಉಪ ಅರಣ್ಯ ಸಂರಕ್ಷಣಾಧಿಕಾರಿ (ಡಿಎಫ್‌ಒ) ಸೌರಭ್ ಕುಮಾರ್ ಅವರಿಗೆ ಮನವಿ ಸಲ್ಲಿಸಿದರು.

**ಶ್ರದ್ಧಾಂಜಲಿ**

ಆಸ್ತಾಂ ತಾವದಿಯಂ ಪ್ರಸೂತಿ ಸಮಯೇ ದುರ್ವಾರಶೂಲವ್ಯಥಾ
ನೈರುಚ್ಯಂ ತನುಶೋಷಣಂ ಮಲಮಯೀ ಶಯ್ಯಾ ಚ ಸಾಂವತ್ಸರೀ ।
ಏಕಸ್ಯಾಪಿ ನ ಗರ್ಭಭಾರಭರಣ ಕ್ಲೇಶಸ್ಯ ಯಸ್ಯ ಕ್ಷಮಃ
ದಾತುಂ ನಿಷ್ಕೃತಿಮುನ್ನತೋಽಪಿ ತನಯಸ್ತಸ್ಯೈ ಜನನ್ಯೈ ನಮಃ ॥
–ಶ್ರೀ ಆದಿಶಂಕರಾಚಾರ್ಯರು

ತಾತ್ಪರ್ಯ : ತಾಯಿಯು ಮಗುವನ್ನು ಹೆರುವಾಗ ಪಡುವ ಯಾತನೆಯು ಅಸಹನೀಯ. ಅವಳು ಮಗುವಿನ ಪೋಷಣೆಯಲ್ಲಿ ಅನಾರೋಗ್ಯಕ್ಕೆ ಈಡಾಗುವುದು, ಮಗುವಿನ ಮಲಮೂತ್ರಾದಿಗಳನ್ನು ಬಳಿದು ಹಾಕುವುದು, ವರ್ಷಾನುಕಾಲ ಉಣ್ಣುವ ಕಷ್ಟಗಳನ್ನು ನೆನಪಿಸಿಕೊಂಡರೆ, ಆಕೆಯ ಋಣವನ್ನು ತೀರಿಸಲು ಈ ಜನ್ಮ ಸಾಲದು.



ಅನ್ನಪೂರ್ಣೇಶ್ವರಿ
**ಶ್ರೀಮತಿ ಚನ್ನಮ್ಮ ದೇವೇಗೌಡ ರವರು**
(ಜನನ: ಜೂನ್ 1937 । ಮರಣ: 18 ಜುಲೈ 2026)

ಸಹೋದರಿ, ಧರ್ಮಪತ್ನಿ, ತಾಯಿಯಾಗಿ ಎಲ್ಲಾ ಜವಾಬ್ದಾರಿಗಳನ್ನು ಸಾರ್ಥಕವಾಗಿ ಪೂರೈಸಿದ ನೀವು ಮಮತಾಮಯಿ, ಕರುಣಾಮಯಿ ಆಗಿದ್ದಿರಿ. ಮನೆ ಬಾಗಿಲಿಗೆ ಬಂದವರನ್ನು ಮಕ್ಕಳಂತೆ ಸಲುಹಿದ ಮಹಾತಾಯಿ. ಇಡೀ ಬದುಕನ್ನು ನಿಸ್ವಾರ್ಥವಾಗಿ ಸವೆಸಿ ಶಿವೈಕ್ಯರಾದ ನಿಮ್ಮ ಅಗಲಿಕೆ ನಮಗೆಲ್ಲರಿಗೂ ಅತೀವ ದುಃಖ ಉಂಟು ಮಾಡಿದೆ. ನಿಮ್ಮ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂದು ಆ ಭಗವಂತನಲ್ಲಿ ಭಕ್ತಿಪೂರ್ವಕವಾಗಿ ಪ್ರಾರ್ಥಿಸುತ್ತೇವೆ.

ಇಂತಿ ದುಃಖತಪ್ತ : ಶ್ರೀ ಹೆಚ್.ಡಿ. ದೇವೇಗೌಡರ ಕುಟುಂಬ ಮತ್ತು ಅಭಿಮಾನಿಗಳು

**ಭಾವಪೂರ್ಣ ಶ್ರದ್ಧಾಂಜಲಿ**



**ಶ್ರೀಮತಿ ಚನ್ನಮ್ಮ ದೇವೇಗೌಡ**
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ

ದುಃಖ ಭಾಗಿಗಳು
ಶ್ರೀಮತಿ ಲಲಿತಾ ಮಣಿ (ಶ್ರೀ ದಿ|| ಹೆಚ್.ಎಸ್ ಪ್ರಕಾಶ್ ರವರ ಧರ್ಮಪತ್ನಿ)
ಮಾಜಿ ಶಾಸಕರು
ಶ್ರೀ ಸ್ವರೂಪ್ ಪ್ರಕಾಶ್, ಶಾಸಕರು ಹಾಗೂ ಸಹೋದರರು,
ಕುಟುಂಬಸ್ಥರು ಮತ್ತು ಹಾಸನ ಜಿಲ್ಲೆ ಜನತೆ

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248